
ನೋಡಿದರೆ, ಆರ್‌ಎಸ್‌ಎಸ್ ಪ್ರಾಬಲ್ಯ ಬೇರೆಯದೇ ರೀತಿ ಇದೆ. ಅಲ್ಲಿನ ಕರಾವಳಿ ಭಾಗದಲ್ಲಿ ಶ್ರೀರಾಮಸೇನೆಯಂತಹ ಸಂಘಟನೆ ಹೇಗೆ ವರ್ತಿಸುತ್ತಿದೆ ಎನ್ನುವ ಅರಿವು ನನಗೆ ಇದೆ. ತೇಜಸ್ವಿ ಸೂರ್ಯ ಅವರಂತಹ ಸಂಸದರು ಹೇಗೆ ಮಾತನಾಡುತ್ತಿದ್ದಾರೆ ಎನ್ನುವುದನ್ನೂ ಕೇಳಿಸಿಕೊಳ್ಳುತ್ತೇನೆ.

**◆ ದೇವನೂರ ಮಹಾದೇವ ಅವರು 'ಆರ್‌ಎಸ್‌ಎಸ್ ಆಳ ಅಗಲ' ಎನ್ನುವ ಕೃತಿ ಬರೆದರು. ಅದರ ಬಗೆಗೆ ನಿಮಗೆ ಗೊತ್ತೆ?**




ಗೊತ್ತು. ಆ ಕೃತಿಯಲ್ಲಿ ಏನಿದೆ ಎನ್ನುವುದನ್ನೂ ಕೇಳಿ ತಿಳಿದುಕೊಂಡಿದ್ದೇನೆ. ಇಂತಹ ಕೆಲಸಗಳಿಂದ ಒಂದು ಸಂವಾದ ಏರ್ಪಡುತ್ತದೆ. ಅದು ಮುಖ್ಯ.

**◆ ಆಕ್ಸ್‌ಫರ್ಡ್‌ನಲ್ಲಿ ಓದಬೇಕು ಎಂದು ನಿಮಗೆ ಯಾಕೆ ಅನ್ನಿಸಿತು?**

ನಾನು ಮೊದಲಿನಿಂದಲೂ ಅನೌಪಚಾರಿಕವಾಗಿ ಸಮಾಜೋ-ರಾಜಕೀಯ ಸಂಬಂಧಿ ಕೃತಿಗಳನ್ನು ಓದಿಕೊಂಡು ಬಂದವನು. ಹೀಗೆ ಸುಮ್ಮನೆ ನನ್ನಷ್ಟಕ್ಕೆ ಏನನ್ನೋ ಓದಿಕೊಂಡು ಇದ್ದರೆ ಭವಿಷ್ಯಕ್ಕೆ ಸಾಕಾಗುವುದಿಲ್ಲ ಅನ್ನಿಸಿತು. ಔಪಚಾರಿಕವಾದ ಕಲಿಕೆಯು ಪ್ರಮುಖ ವಿಶ್ವವಿದ್ಯಾಲಯದಲ್ಲಿ ಆದಾಗ, ಅನೇಕ ಪ್ರೊಫೆಸರ್‌ಗಳ ಸಂಪರ್ಕ ಸಿಗುತ್ತದೆ. ಹೊಸ ವಿಚಾರಗಳನ್ನು ಅಧಿಕೃತವಾಗಿ ಕಲಿಯಲು ಸಾಧ್ಯವಿದೆ. ನಾನು ಅದನ್ನೇ ಮಾಡಿದೆ.

**◆ ನಿಮ್ಮ ಊರಲ್ಲಿ ಈಗ ನಿಮ್ಮನ್ನು ಹೇಗೆ ನೋಡುತ್ತಾರೆ?**

ನಾನು ಅಲ್ಲಿ ಈಗ ಮಾದರಿ ವ್ಯಕ್ತಿ. ಎಷ್ಟೋ ಹುಡುಗರು ಹೇಗೆ ಓದಬೇಕು, ಏನು ಕಲಿಯಬೇಕು ಎಂಬ ಮುಖ್ಯವಾದ ಸರಳ ಪ್ರಶ್ನೆಗಳನ್ನು ಕೇಳುತ್ತಾರೆ. ಖುಷಿಯಾಗುತ್ತದೆ.

**◆ ಸಮಾಜದ ಬದಲಾವಣೆ ನಿಮ್ಮಂತಹ ವ್ಯಕ್ತಿಯ ಕೆಲಸಗಳಿಂದ ಹೇಗೆ ಸಾಧ್ಯವಾಗಬಲ್ಲದು?**

ನಾನು ಬದಲಾವಣೆ ಮಾಡಬಲ್ಲ ವ್ಯಕ್ತಿ ಎಂದು ಯಾವತ್ತೂ ಭಾವಿಸಿಲ್ಲ. ಕೇಳಬೇಕಾದ ಪ್ರಶ್ನೆಗಳನ್ನು ಸರ್ಕಾರ ಸೇರಿದಂತೆ ಕೇಳಬೇಕಾದವರಿಗೆ ಕೇಳುವೆನಷ್ಟೆ. ಬದಲಾವಣೆ ಅಲ್ಲಿಂದ ಮುಂದೆ ಆಗಬೇಕು. ಸಂವಾದ ರೂಪಿಸುವುದು ಮುಖ್ಯ.

**◆ ನೀವು ಕಪ್ಪು ಕನ್ನಡಕ ಹಾಕಿಕೊಂಡು ವೇದಿಕೆಯ ಗೋಷ್ಠಿಯಲ್ಲಿ ಕುಳಿತಿದ್ದಿರಿ. ಇದು ಯಾವುದರ ಸಂಕೇತ?**

ನಾನು ಹಿಂದೆ ಹೇಳಿದೆನಲ್ಲ – ಜೀನ್ಸ್ ಹಾಕಬೇಡ, ಶೇಡ್ಸ್ ಹಾಕಬೇಡ ಎಂದೆಲ್ಲ ನಿರ್ಬಂಧ ವಿಧಿಸಿದ್ದರು ಅಂತ. ಈಗ ವೇದಿಕೆ ಮೇಲೆ ನನ್ನಿಷ್ಟದ ಠಾಕುಠೀಕಾದ ಉಡುಗೆ ತೊಟ್ಟು, ಶೇಡ್ಸ್ ಹಾಕಿಕೊಂಡು ಕುಳಿತರೆ ಆತ್ಮವಿಶ್ವಾಸ ಹೆಚ್ಚುತ್ತದೆ (ನಗುವಿಲ್ಲದ ಗಂಭೀರ ಭಾವದಲ್ಲಿ).

**◆ ನಿಮಗೆ ಇಷ್ಟವಾದ ನಿಮ್ಮ ರ್‍ಯಾಪ್ ಯಾವುದು?**

'ಕೋಟಾ ಈಸ್ ನಾಟ್ ಚಾರಿಟಿ' (Quota is not charity). ಆ ರ್‍ಯಾಪ್ ಅನ್ನು ಯೂಟ್ಯೂಬ್‌ನಲ್ಲಿ ಕೇಳಬಹುದು: youtube.com/watch?v = BuKsGQ-xpXM

●